# ನಗರಸಭಾ ಕಾರ್ಯಾಲಯ, ಮಂಡ್ಯ

**ಸಂಖ್ಯೆ:ನಸಮಂ/ಸಭೆ/23/2006–07.** **ದಿನಾಂಕ:30–12–2006.**

## –: ಸಾಮಾನ್ಯ ಅಧಿವೇಶನ :–

ದಿನಾಂಕ:30–12–2006ನೇ ಶನಿವಾರ ಬೆಳಿಗ್ಗೆ 11–00 ಗಂಟೆಗೆ ಸರಿಯಾಗಿ ಮಂಡ್ಯ ನಗರಸಭಾ ಕಾರ್ಯಾಲಯದ ಶ್ರೀ ಧರಣಪ್ಪ ಸಭಾಂಗಣದಲ್ಲಿ ಮಾನ್ಯ ನಗರಸಭಾಧ್ಯಕ್ಷರವರ ಅಧ್ಯಕ್ಷತೆಯಲ್ಲಿ ನಡೆಸಲಾದ ನಗರಸಭಾ ಸಾಮಾನ್ಯ ಅಧಿವೇಶನದ ನಡವಳಿಕೆಗಳು.

ಹಾಜರಿ: 27+1 ಗೈರು ಹಾಜರಿ: 7+3 ಖಾಲಿ: 1 ಒಟ್ಟು: 35+4

**ವಿಷಯ:1:–** ದಿನಾಂಕ:28–11–2006ರ ಸಾಮಾನ್ಯ ಸಭೆ ಮತ್ತು ದಿನಾಂಕ:19–12–2006ರಂದು ಮುಂದೂಡಲಾಗಿದ್ದು ದಿನಾಂಕ:20–12–2006ರಂದು ನಡೆಸಿದ ವಿಶೇಷ ಸಭೆ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.

**ತೀರ್ಮಾನ:1:–** ಹಿಂದಿನ ಸಭೆ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ಪೌರಾಯುಕ್ತರು ಮಾನ್ಯ ಜಿಲ್ಲಾಧಿಕಾರಿಗಳು,ಮಂಡ್ಯ ಜಿಲ್ಲೆ, ಮಂಡ್ಯರವರ ನ್ಯಾಯಾಲಯದ ಪ್ರಕರಣ ಸಂಖ್ಯೆ ಎಂ.ಎ.12/2006 ದಿನಾಂಕ:20–12–2006ರ ನಗರಸಭಾ ವಿಶೇಷ ಅಧಿವೇಶನ ಸಂಖ್ಯೆ:5ರ ತೀರ್ಮಾನವನ್ನು ಮುಂದಿನ ವಿಚಾರಣಾ ದಿನಾಂಕದವರೆಗೆ ತಡೆಹಿಡಿದಿದೆ ಎಂಬ ಮಧ್ಯಕಾಲೀನ ಆಜ್ಞೆ ವಿವರವನ್ನು ಸಭೆಗೆ ತಿಳಿಸಿದರು.

2003–04 ಮತ್ತು 2004–05ನೇ ಸಾಲಿನಲ್ಲಿ ಶೇ.18ರ ಲೆಕ್ಕಶೀರ್ಷಿಕೆಯಡಿಯಲ್ಲಿ ಸಮುದಾಯ ಭವನ ನಿರ್ಮಾಣ ಅಭಿವೃದ್ಧಿ ಕಾಮಗಾರಿ ಮತ್ತು ಎ.ಡಿ.ಬಿ.ಸಹಯೋಗದೊಂದಿಗೆ ಶೌಚಾಲಯ ನಿರ್ಮಿಸಲು ಅಳವಡಿಸಿಕೊಂಡಿದ್ದ ಮೊಬಲಗು ರೂ.9.15ಲಕ್ಷಗಳಲ್ಲಿ ಉಳಿಕೆಯಾಗಿರುವ 5 ಲಕ್ಷ ರೂ.ಗಳ ಹಣದಲ್ಲಿ 2006–07ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ನಿರ್ಮಿಸಿಕೊಡುವ ಮನೆ ನಿರ್ಮಾಣ ಕಾಮಗಾರಿಗೆ ಫಲಾನುಭವಿಗಳ ವಂತಿಕೆಯನ್ನು ನಿವಾಸಿಗಳು ಹಣ ಕಟ್ಟಲು ಶಕ್ತರಾಗಿ ಇಲ್ಲದ್ಧರಿಂದ ದಿನಾಂಕ:28–11–2006 ಸಭೆಯಲ್ಲಿ ಸಭೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ.ಎಂ.ಸಿ.ಮಹಾಲಿಂಗು ಮತ್ತು ಬಿ.ರಾಜಣ್ಣರವರ ಸಲಹೆಯಂತೆ ಮನೆ ನಿರ್ಮಾಣ ಕಾಮಗಾರಿ ಆಯ್ಕೆಯಾಗುವ ಅರ್ಹ ಫಲಾನುಭವಿಗಳ ವಂತಿಕೆ ಹಣ ತಲಾ 5000/– ರೂ.ಗಳಂತೆ ವೇಣುಗೋಪಾಲ ಕೊಳಚೆ ಪ್ರದೇಶ, ಆರ್.ಟಿ.ಓ. ಕೊಳಚೆ ಪ್ರದೇಶ ಹಾಗೂ ಇತರೆ ಸ್ಲಂಗಳಿಗೂ ಅನ್ವಯಿಸುವಂತೆ ನೀಡಲು ತೀರ್ಮಾನಿಸಲಾಯಿತು.

ಮನವಿ ಪತ್ರದ ರೀತ್ಯಾ ಸಭೆಯಲ್ಲಿ ದಿನಾಂಕ:28–11–2006ರ ಸಾಮಾನ್ಯ ಸಭೆ ಮತ್ತು ದಿನಾಂಕ:20–12–2006ರ ವಿಶೇಷ ಸಭೆಯ ನಡವಳಿಕೆಗಳನ್ನು ಸರ್ವಾನುಮತದಿಂದ ಒಪ್ಪಿ ನಿರ್ಣಯ ಕೈಗೊಳ್ಳಲಾಯಿತು. ಹಾಗೂ 28–11–2006 ಸಾಮಾನ್ಯ ಸಭೆಯ ವಿಷಯ ಸಂಖ್ಯೆ:36 ಮತ್ತು 37(6)ನ್ನು ತಿದ್ದುಪಡಿ ಮಾಡಿಕೊಂಡು ನಗರಸಭಾ ನಿಧಿಯಿಂದ ಮಾಡಿಸಬಹುದೆಂದು ಒಪ್ಪಲಾಯಿತು.

ದಿನಾಂಕ:28–11–2006ರ ತೀರ್ಮಾನ ಸಂಖ್ಯೆ:2 ರಲ್ಲಿ ಸ್ಥಾಯಿ ಸಮಿತಿಯ ಸಂಖ್ಯೆ:5ರಂತೆ ಪೆಟ್ಟಿಗೆ ಅಂಗಡಿ ಇಡಲು ಕಲಾ ಮಂದಿರದ ರಸ್ತೆಯಲ್ಲಿ ಸೂಕ್ತವಾದ ಜಾಗವನ್ನು ಶ್ರೀಮತಿ:ಪದ್ಮಮ್ಮ ಕೋಂ.ಲೇ.ಗೋವಿಂದಪ್ಪನವರು , ಅಂಗವಿಕಲಳು ರವರಿಗೆ ಕೊಡಬಹುದೆಂದು ಶ್ರೀ.ಟಿ.ಶಂಕರ್ ಮತ್ತು ಶ್ರೀ.ರವಿಶಂಕರೇಗೌಡರವರು ಸೂಚಿಸಿರುವುದನ್ನು ಸಭೆಯು ಬಹುಮತ ದಿಂದ ಒಪ್ಪಿ ತೀರ್ಮಾನಿಸಲಾಯಿತು.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಎಂ.ಡಿ.ರಮೇಶ್‌ರಾಜುರವರು ಮಾತನಾಡುತ್ತಾ ನಗರಸಭೆಯ ಮಾಜಿ ನಗರಸಭಾಧ್ಯಕ್ಷರುಗಳ ಹೆಸರುಗಳುಳ್ಳ ಆರ್ಚ್‌ಗಳನ್ನು ನಿರ್ಮಾಣ ಮಾಡುವಂತೆ ಸಭೆಯಲ್ಲಿ ಸೂಚಿಸಿರುವುದನ್ನು ಒಪ್ಪಲಾಯಿತು.

ಸಭೆ ನಡೆಯುವ ವೇಳೆಯಲ್ಲಿ ಮಾನ್ಯ ಸದಸ್ಯರುಗಳು ಸಹಿ ಮಾಡಿ ಕೊಟ್ಟಿರುವ ಮನವಿಯನ್ನು ಓದಿ ರೆಕಾರ್ಡು ಮಾಡಲಾಯಿತು. ಮನವಿ ಪತ್ರ ವಿವರ ಈ ಕೆಳಕಂಡಂತೆ ಇರುತ್ತದೆ.

ರವರಿಗೆ, ದಿನಾಂಕ:30–12–2006.

ಅಧ್ಯಕ್ಷರು/ಪೌರಾಯುಕ್ತರು,
ನಗರಸಭೆ, ಮಂಡ್ಯ.

ಮಾನ್ಯರೆ,

ವಿಷಯ: ದಿನಾಂಕ:30–12–2006 ಸಭೆಯ ಬಗ್ಗೆ.

ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:30–12–2006ರಂದು ಸಾಮಾನ್ಯ ಸಭೆ ಕರೆದಿದ್ದು ಸದರಿ ಅಜೆಂಡಾದಲ್ಲಿನ ವಿಷಯಗಳಿಗೆ ಈ ಕೆಳಕಂಡಂತೆ ನಮ್ಮಗಳ ಒಪ್ಪಿಗೆ ಇರುತ್ತದೆ.

ವಿಷಯ ಸಂಖ್ಯೆ (1)ರಲ್ಲಿ ಈ ಹಿಂದಿನ ಸಭೆ ದಿನಾಂಕ:28–11–2006ರ ಸಾಮಾನ್ಯ ಸಭೆಯಲ್ಲಿನ ವಿಷಯ ಸಂಖ್ಯೆ(3)ರಲ್ಲಿ 12ನೇ ಹಣಕಾಸು ಯೋಜನೆಯಡಿಯಲ್ಲಿ ವಾರ್ಡ್‌ವಾರು ರೂ.2.00ಲಕ್ಷಗಳ ಅಂದಾಜು ಪಟ್ಟಿಗಳನ್ನು ತಯಾರಿಸಿ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಿದ್ದು ಒಟ್ಟು 35 ವಾರ್ಡ್‌ಗಳಿಗೆ ರೂ.70.00ಲಕ್ಷಗಳಾಗಿದ್ದು ಉಳಿಕೆ ಮೊಬಲಗಿನಲ್ಲಿ (1) ನಗರಸಭಾ ಕಛೇರಿ ಕಟ್ಟಡಕ್ಕೆ ಬಣ್ಣ ಹೊಡೆಸುವುದು ಮತ್ತು ಕಛೇರಿ ಮುಂಭಾಗದ ರಸ್ತೆ ಡಾಂಬರೀಕರಣ ರೂ.3.84ಲಕ್ಷ (2) ನಗರಸಭಾ ಬಸ್ ಖಾಸಗಿ ನಿಲ್ದಾಣಕ್ಕೆ ಡಾಂಬರೀಕರಣ ಕಾಮಗಾರಿ 9.00ಲಕ್ಷ ರೂ.ಗಳೆಂದು ತಿದ್ದುಪಡಿ ಮಾಡಿಕೊಂಡು ಸಾಮಾನ್ಯ ಸಭೆ ಮತ್ತು ವಿಶೇಷ ಸಭೆ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡಲು ಒಪ್ಪಿರುತ್ತೇವೆ.

ವಿಷಯ ಸಂಖ್ಯೆ(2)ರಲ್ಲಿನ ಜಮಾ–ಖರ್ಚುಗಳನ್ನು ಒಪ್ಪಿರುತ್ತೇವೆ.
ವಿಷಯ ಸಂಖ್ಯೆ(3) ರಿಂದ (6)ರವರೆಗಿನ ವಿಷಯಗಳಿಗೆ ಕಾನೂನು ಅನುಸರಿಸಿ ಕ್ರಮ ಕೈಗೊಳ್ಳಲು ಒಪ್ಪಿರುತ್ತೇವೆ.

ಮೇಲ್ಕಂಡ ನಮ್ಮ ಅಭಿಪ್ರಾಯವನ್ನು ರೆಕಾರ್ಡ್ ಮಾಡುವಂತೆ ಲಿಖಿತ ಮೂಲಕ ಸಹಿ ಮಾಡಿ ಸಲ್ಲಿಸಿರುತ್ತೇವೆ.

1) ಶ್ರೀಮತಿ: ಬಿ.ಆರ್.ಇಂದಿರಾ (ಸಹಿ)
2) ಮುನಾವರ್ ಖಾನ್ (ಸಹಿ)
3) ಶಂಕರಪ್ರಸಾದ್ (ಸಹಿ)
4) ಶ್ರೀ.ಹೆಚ್.ಸಿ.ಬೋರೇಗೌಡ (ಸಹಿ)
5) ಮಹಮದ್ ಹನೀಫ್ (ಸಹಿ)
6) ಎಂ.ಎಸ್.ಸುಜಾತಮಣಿ (ಸಹಿ)
7) ಶಿವಣ್ಣ ಹೆಗ್ಗಡೆ (ಸಹಿ)
8) ನಂಜಯ್ಯ (ಸಹಿ)
9) ಬಿ.ಎಂ.ಬಾಷಾ (ಸಹಿ)
10) ನಿರ್ಮಲ ಚಿಕ್ಕೇಗೌಡ (ಸಹಿ)
11) ಸುಬ್ರಮಣ್ಯ (ಸಹಿ)
12) ಈರಮ್ಮ (ಸಹಿ)
13) ಚನ್ನಮ್ಮ (ಸಹಿ)
14) ಭದ್ರಮ್ಮ (ಸಹಿ)
15) ಲಕ್ಷ್ಮಮ್ಮ (ಸಹಿ)
16) ಜೀನತ್ ಸಯೀದ್ (ಸಹಿ)
17) ರವಿಶಂಕರೇಗೌಡ (ಸಹಿ)
18) ಟಿ.ಶಂಕರ್ (ಸಹಿ)
19) ಬಿ.ರಾಜಣ್ಣ (ಸಹಿ)

20) ಮಹದೇವು (ಕಿಟ್ಟಿ) (ಸಹಿ)
21) ಮಹದೇವ (ಸಹಿ)
22) ಎಂ.ಸಿ.ಮಹಲಿಂಗು (ಸಹಿ)
23) ರತ್ನಮ್ಮ (ಸಹಿ)
24) ಅಶ್ವಿನಿ ಭಾರತೀಶ್ (ಸಹಿ)
25) ಎಂ.ಸಿ.ರಾಘವೇಂದ್ರ (ಸಹಿ)
26) ನಾಗರಾಜು (ಸಹಿ)

**ವಿಷಯ:2:-** 2006ನೇ ಅಕ್ಟೋಬರ್ ಮತ್ತು ನವೆಂಬರ್ ಮಾಹೆಗಳ ಜಮೆ ಖರ್ಚುಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.

**ತೀರ್ಮಾನ:2:-** 2006ನೇ ಅಕ್ಟೋಬರ್ ಮತ್ತು ನವೆಂಬರ್ ಮಾಹೆಗಳ ಜಮೆ-ಖರ್ಚುಗಳನ್ನು ಓದಿ ಒಪ್ಪಲಾಯಿತು.

**ವಿಷಯ:3:-** ನಗರಸಭಾ ಸದಸ್ಯರಾದ ಶ್ರೀ.ನಾಗರಾಜುರವರು ಮನವಿ ಸಲ್ಲಿಸಿ ವಾರ್ಡ್ ನಂಬರ್:30ರಲ್ಲಿ ಗುತ್ತಲು ಖಾತಾ ನಂಬರ್:9094/ಜಿ208/19 ರಲ್ಲಿ 45'*20'ಅಡಿಗಳನ್ನು ರಸ್ತೆಗಾಗಿ ಭೂ ಸ್ವಾಧೀನಪಡಿಸಿ ಕೊಳ್ಳುವ ಬಗ್ಗೆ ಮತ್ತು 45'*9'ಅಡಿಗಳ ಗುಡಿಸಿಲಿಗೆ ಪರಿಹಾರ ನೀಡುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:3:-** ಕಾನೂನು ಅನುಸರಿಸಿ ಭೂಸ್ವಾಧೀನಪಡಿಸಿಕೊಳ್ಳುವುದು ಮತ್ತು ಪರಿಹಾರ ನೀಡುವುದರ ಬಗ್ಗೆ ಕ್ರಮ ಕೈಗೊಳ್ಳಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:4:-** ಶ್ರೀಮತಿ:ದೊಡ್ಡತಾಯಮ್ಮ ಬಿನ್ ಕೆಂಗಯ್ಯ ಸುಭಾಷ್‌ನಗರ, ಮಂಡ್ಯರವರು ಅರ್ಜಿ ಸಲ್ಲಿಸಿ ಮಂಡ್ಯ ನಗರದ ಚಾಮುಂಡೇಶ್ವರಿ ದೇವಸ್ಥಾನದ ಪಕ್ಕದಲ್ಲಿರುವ ಖಾತಾ ನಂಬರ್:ಡಿ3/1270/2170/1-ಹೆಚ್**ರ** ಬಾಬ್ತು $\frac{15'+12'}{2}$*60'ಅಡಿಗಳು ಪೂರ್ಣವಾಗಿ ರಸ್ತೆಗೆ ಹೋಗಿರುವ ಜಾಗಕ್ಕೆ ಪರಿಹಾರ ಕೊಡಿಸಿಕೊಡಬೇಕೆಂದು ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:4:-** ಕಾನೂನು ಅನುಸರಿಸಿ ಕ್ರಮ ಕೈಗೊಳ್ಳಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:5:-**ಶ್ರೀಮತಿ:ನಿರ್ಮಲ ಚಿಕ್ಕೇಗೌಡರವರಿಂದ ಬಂದಿರುವ ವಿಷಯ . ವಾರ್ಡ್ ನಂಬರ್:34 ಚಿಕ್ಕೇಗೌಡ ಬಡಾವಣೆಯಲ್ಲಿ ನಾಲ್ಕು ಕೊಳಚೆ ನೀರಿನ ಕಟ್ಟೆಗಳು ವಾರ್ಡ್‌ನ ಮಧ್ಯಭಾಗದಲ್ಲಿದ್ದು ಅನಾರೋಗ್ಯಕರ ವಾತಾವರಣ ಸೃಷ್ಟಿಯಾಗಿರುವುದರಿಂದ, ನಗರದ ರಸ್ತೆ ಬದಿಗಳಲ್ಲಿ ಹಾಕಲ್ಪಡುವ ಡೆಬ್ರಿಸ್ ಮಣ್ಣಿನಿಂದ ಸದರಿ ಗುಂಡಿಗಳನ್ನು ಭರ್ತಿ ಮಾಡಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:5:-** ಮಾಡಿಸಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:6:-** ನಗರಸಭಾ ಸದಸ್ಯರಾದ ಶ್ರೀ.ಶಂಕರಪ್ರಸಾದ್ (ಪ್ರಸನ್ನ)ರವರಿಂದ ಬಂದಿರುವ ವಿಷಯ. ಅಶೋಕ ನಗರ 1ನೇ ತಿರುವಿನಿಂದ ವಿ.ವಿ.ರಸ್ತೆಯ ಮೈಸೂರು ಬ್ಯಾಂಕ್ ಎದುರು 18 ಅಡಿ ಕನ್ಸರ್ವೆನ್ಸಿ ಗಲ್ಲಿ ಇದ್ದು ಸದರಿ ಗಲ್ಲಿಯ ಮೂಲಕ ಅಶೋಕನಗರ 3ನೇ ಮುಖ್ಯ ರಸ್ತೆಗೆ ನೇರ ಸಂಪರ್ಕ ಇರುತ್ತದೆ. ಇತ್ತೀಚೆಗೆ ನಗರಸಭೆಯಿಂದ ಪತ್ರಿಕಾ ಪ್ರಕಟಣೆ ಹೊರಡಿಸಿ ಕನ್ಸರ್ವೆನ್ಸಿ ಗಲ್ಲಿ ಜಾಗವನ್ನು ಆಜುಬಾಜು ಎರಡು ಕಡೆಗಿರುವ ಆಸ್ತಿ ಮಾಲೀಕರುಗಳಿಗೆ ಹಣ ಪಡೆದು ನೀಡಲಾಗು ವುದೆಂದು ತಿಳಿಸಲಾಗಿರುತ್ತದೆ. ಸದರಿ ಗಲ್ಲಿಯನ್ನು ರಸ್ತೆಯಾಗಿ ಮಾರ್ಪಡಿಸಿದರೆ, ಸಾರ್ವಜನಿಕರು ತಿರುಗಾಡಲು ಅನುಕೂಲವಾಗುವುದರಿಂದ , ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಕನ್ಸರ್ವೆನ್ಸಿ ಗಲ್ಲಿ ಜಾಗವನ್ನು ಸಂಪರ್ಕ ರಸ್ತೆಯಾಗಿ ಮಾಡಿಕೊಡುವಂತೆ ಕೋರಿರುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:6:-** ನಿಯಮಾನುಸಾರ ಮಾಡಿಸಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:7:- ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಸಭೆ ವೇಳೆಯಲ್ಲಿ ಬರಬಹುದಾದ ಇತರೆ ಜರೂರಾತಿ ವಿಷಯಗಳು.**

**ವಿಷಯು:7(1):–** ದಿನಾಂಕ:30–12–2006ರಂದು ಸಾಮಾನ್ಯ ಸಭೆ ನಡೆಯುತ್ತಿರುವ ವೇಳೆಯಲ್ಲಿ "ಡಿ"ಗ್ರೂಪ್ ನೌಕರರಾದ ಶ್ರೀ.ಕೆ.ಕುಳ್ಳೇಗೌಡ, ಪೌರಕಾರ್ಮಿಕ ಶ್ರೀ.ಮುತ್ತಾಲಯ್ಯ ಸಭೆಯ ಕಲಾಪಕ್ಕೆ ಅಡ್ಡಿಪಡಿಸಿ ಅಸಭ್ಯ ರೀತಿಯಲ್ಲಿ ವರ್ತಿಸಿರುವ ಬಗ್ಗೆ ಇವರುಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ವಿಚಾರ.

**ತೀರ್ಮಾನ:7(1) :–** ಸಾಮಾನ್ಯ ಸಭೆ ನಡೆಯುವ ವೇಳೆಯಲ್ಲಿ ಕಛೇರಿ ನೌಕರರಾದ ಶ್ರೀ.ಕೆ.ಕುಳ್ಳೇಗೌಡ, ಶ್ರೀ.ಮುತ್ತಾಲಯ್ಯರವರು ನಗರಸಭಾ ಕಛೇರಿ ಆವರಣದಲ್ಲಿ ನೌಕರರುಗಳನ್ನು ಸೇರಿಸಿಕೊಂಡು ಸದಸ್ಯರಾದ ಶ್ರೀ.ಮಹದೇವು(ಕಿಟ್ಟಿ)ರವರ ವಿರುದ್ಧ ವೈಯಕ್ತಿಕ ದ್ವೇಷಗಳಿಂದ ನೌಕರರಲ್ಲದವರನ್ನು ಸಹ ಸೇರಿಸಿ ನಗರಸಭಾ ಅಧ್ಯಕ್ಷರು ಮತ್ತು ಸದಸ್ಯರುಗಳ ವಿರುದ್ಧ ಘೋಷಣೆಗಳನ್ನು ಕೂಗಿಕೊಂಡು ಸಭೆ ನಡೆಯುತ್ತಿದ್ದ ವೇಳೆಯಲ್ಲಿ ಸಭಾಂಗಣದ ಬಾಗಿಲನ್ನು ತೆರೆದು ಒಳಗಡೆ ಪ್ರವೇಶಿಸಿ ಸಭಾ ನಿಯಮಗಳಿಗೆ ವಿರುದ್ಧವಾಗಿ ಏರು ಧ್ವನಿಯಿಂದ ನನ್ನನ್ನು ನಿಂಧಿಸಿದ ಸದಸ್ಯರನ್ನು ಬಂಧಿಸಬೇಕು ಎಂಬುದಾಗಿ ಕೂಗಾಡಿಕೊಂಡು ಸದಸ್ಯರೊಡನೆ ಚರ್ಚೆಗಿಳಿದು ಸಭಾ ಕಲಾಪಕ್ಕೆ ಅಡ್ಡಿಯುಂಟು ಮಾಡಿರುತ್ತಾರೆ. ಹಾಗೂ ನೌಕರರುಗಳನ್ನು ತಪ್ಪು ದಾರಿಗೆಳೆದು ಅನುಚಿತವಾಗಿ ಉದ್ಧಟತನದಿಂದ ವರ್ತಿಸಿರುತ್ತಾರೆ.

ಹಾಗೂ ದಿನಾಂಕ:7–6–2006ರ ಸಾಮಾನ್ಯ ಸಭೆಯಲ್ಲಿಯೂ ಸಹ ಸದರಿ ನೌಕರನಾದ ಶ್ರೀ.ಕೆ.ಕುಳ್ಳೇಗೌಡ ರವರ ಮೇಲೆ ತೀರ್ಮಾನ ಕೈಗೊಳ್ಳಲಾಗಿದೆ.

ಯಾವುದೇ ಮುಷ್ಕರ ಮಾಡುವ ಮುನ್ನ ಸಂಸ್ಥೆಯ ಮುಖ್ಯಸ್ಥರ ಗಮನಕ್ಕೆ ತಂದು ಅನುಮತಿ ಪಡೆದು ಮುಷ್ಕರ ಮಾಡಬಹುದಾಗಿದೆ.

ಮೇಲಧಿಕಾರಿಗಳ ಗಮನಕ್ಕೆ ತಾರದೆ ಏಕಾಏಕಿ ಮುಷ್ಕರ ನಡೆಸಿ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಅಡಚಣೆ ಉಂಟಾಗಿರುತ್ತದೆ. ಸದಸ್ಯರುಗಳಿಗೆ ಮತ್ತು ಸಭೆಗೆ ಅಪಮಾನ ಎಸಗಿದ ನೌಕರರುಗಳಾದ ಶ್ರೀ.ಕೆ.ಕುಳ್ಳೇಗೌಡ ಮತ್ತು ಶ್ರೀ.ಮುತ್ತಾಲಯ್ಯರವ ರನ್ನು ಸೇವೆಯಿಂದ ಅಮಾನತ್ತುಗೊಳಿಸುವಂತೆ ಸಭೆಯು ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ:7(2):– ಮಂಡ್ಯ ನಗರ ವ್ಯಾಪ್ತಿಯಲ್ಲಿ ಬರುವ ಒಳಚರಂಡಿ ಕಾಮಗಾರಿಗಳನ್ನು ಮಾಡಿಸುವ ಬಗ್ಗೆ.

| | | |
|---|---|---|
| (1) | ವಾರ್ಡ್ ನಂಬರ್ 10ರಲ್ಲಿ ಶ್ರೀ.ಜಯರಾಜ್ ಮನೆಯಿಂದ ಆದರ್ಶ ಸ್ಟುಡಿಯೋ ವರೆಗೆ ಒಳಚರಂಡಿ ಲೈನ್ ಅಳವಡಿಸುವುದು. | 0.20 |
| (2) | ವಾರ್ಡ್ ನಂ.17 ಗಾಂಧಿನಗರ 6ನೇ ಕ್ರಾಸ್‌ನಲ್ಲಿ ಶ್ರೀಮತಿ:ಪುಟ್ಟಲಿಂಗಮ್ಮನವರ ಮನೆಯಿಂದ ಕರ್ನಾಟಕ ಬಾರ್ ರಸ್ತೆವರೆಗೆ ಮ್ಯಾನ್ ಹೋಲ್ ಛೇಂಬರ್ ಮತ್ತು ಒಳಚರಂಡಿ ಪೈಪ್ ಅಳವಡಿಸುವುದು. | 0.35 |
| (3) | ವಾರ್ಡ್ ನಂ.22ರ ಹಾಲಹಳ್ಳಿಕೆರೆ 4ನೇ ಕ್ರಾಸ್‌ನಲ್ಲಿ ಮಿನಿ ವಾಟರ್ ಟ್ಯಾಂಕ್‌ನಿಂದ ಮಂಚೇಗೌಡರ ಮನೆಯವರೆಗೆ ಮ್ಯಾನ್‌ಹೋಲ್ ಛೇಂಬರ್ ಮತ್ತು ಒಳಚರಂಡಿ ಲೈನ್ ಅಳವಡಿಸುವುದು. | 0.99 |
| (4) | ವಾರ್ಡ್ ನಂ.22ರ ಹಾಲಹಳ್ಳಿ 6ನೇ ಕ್ರಾಸ್‌ನಲ್ಲಿ ಚಲುವಮೂರ್ತಿ ಮನೆ ಯಿಂದ ಚೌಡಮ್ಮನವರ ಮನೆವರೆಗೆ ಮ್ಯಾನಲಹೋಲ್ ಛೇಂಬರ್ ಮತ್ತು ಒಳಚರಂಡಿ ಲೈನ್ ಅಳವಡಿಸುವುದು. | 0.20 |
| (5) | ವಾರ್ಡ್ ನಂ.25ರ ಬೋವಿ ಕಾಲೋನಿಯ 3ನೇ ಕ್ರಾಸ್‌ನಲ್ಲಿ ರಮಾ ದೇವಿ ಮನೆಯಿಂದ ಎಂ.ನಟರಾಜ್ ಮನೆವರೆಗೆ ಮ್ಯಾನ್‌ಹೋಲ್ ಛೇಂಬರ್ ಮತ್ತು ಒಳಚರಂಡಿ ಲೈನ್ ಅಳವಡಿಸುವುದು. | 0.20 |
| (6) | ವಾರ್ಡ್ ನಂ.25ರ ಲೇಬರ್ ಕಾಲೋನಿ 3ನೇ ಕ್ರಾಸ್‌ನಲ್ಲಿ ಶ್ರೀ.ತಿಮ್ಮಯ್ಯ ನವರ ಮನೆಯಿಂದ ಶ್ರೀ.ರಾಘವೇಂದ್ರ ಬೇಕರಿವರೆಗೆ ಮ್ಯಾನ್‌ಹೋಲ್ ಛೇಂಬರ್ ಮತ್ತು ಒಳಚರಂಡಿ ಲೈನ್ ಅಳವಡಿಸುವುದು. | 0.55 |
| (7) | ವಾರ್ಡ್ ನಂ.25ರ ಲೇಬರ್ ಕಾಲೋನಿ 4ನೇ ಕ್ರಾಸ್‌ನಲ್ಲಿ ಗಾಯಿತ್ರಿ ಗಣೇಶ್ ಮನೆಉಇಂದ ಗೋಕುಲ ದರ್ಶನ ಅಂಗಡಿವರೆಗೆ ಮ್ಯಾನ್ ಹೋಲ್ ಛೇಂಬರ್ ಮತ್ತು ಒಳಚರಂಡಿ ಲೈನ್ ಅಳವಡಿಸುವುದು. | 0.50 |

**ತೀರ್ಮಾನ:7(2):–** ಸದರಿ ಕಾಮಗಾರಿಗಳನ್ನು ಮಾಡಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:7(3):–** ಈ ಕೆಳಕಂಡ ಟೆಂಡರ್‌ಗಳನ್ನು ಅಂಗೀಕರಿಸುವ ವಿಚಾರ.
ಟೆಂಡರ್ ಪ್ರಕಟಣೆ ಸಂಖ್ಯೆ(1) ನಸಮಂ/ತಾಂತ್ರಿಕ/ಟೆಂಡರ್/ವಿನಿ/ಸಿಆರ್/157/2006–07 ದಿನಾಂಕ:18–12–2006
(2) ಸಂಖ್ಯೆನಸಮಂ/ತಾಂತ್ರಿಕ/ಟೆಂಡರ್/ವಿನಿ/ಸಿಆರ್/158/2006–07 ದಿನಾಂಕ:18–11–2006.
(3) ಸಂಖ್ಯೆನಸಮಂ/ತಾಂತ್ರಿಕ/ಟೆಂಡರ್/ವಿನಿ/ಸಿಆರ್/159/2006–07 ದಿನಾಂಕ:18–11–2006.
(4) ಸಂಖ್ಯೆನಸಮಂ/ತಾಂತ್ರಿಕ/ಟೆಂಡರ್/ವಿನಿ/ಸಿಆರ್/160/2006–07 ದಿನಾಂಕ:18–11–2006.

**ತೀರ್ಮಾನ:7(3):–** ಅಂದಾಜು ಮೊತ್ತಕ್ಕಿಂತ ಶೇಕಡ 5% ಹೆಚ್ಚುವರಿ ನಿಗಧಿಗೊಳಿಸಿ ಟೆಂಡರ್‌ಗಳನ್ನು ಅನುಮೋದಿಸಲಾಯಿತು.

**ವಿಷಯ:7(4):–** ಮಂಡ್ಯ ನಗರಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಬಂದ ವೇಳೆಯಲ್ಲಿ ನಗರ ವ್ಯಾಪ್ತಿಯ ಎರಡು ಕಡೆಗಳಲ್ಲಿ ಮಣ್ಣನ್ನು ಸಮಮಟ್ಟ ಮಾಡಿ ಶೇಖರಣೆಯಾಗಿರುವ ಮಣ್ಣನ್ನು ಸಾಗಿಸಲು ಡೋಜರ್ ಗಂಟೆ 1ಕ್ಕ ರೂ.350–00 ಮತ್ತು ಜೆ.ಸಿ.ಪಿ. ಗಂಟೆ 1ಕ್ಕೆ ರೂ.750–00 ಗಳಿಗೆ ಸದರಿ ;ಕೆಲಸಗಳನ್ನು ತುರ್ತು ಮಾಡಿಸಿರು ವುದರಿಂದ ಹಣ ಪಾವತಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:7(4):–** ಸದರಿ ಮೊತ್ತವನ್ನು ಪಾವತಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:7(5):–** ಸದಸ್ಯರಾದ ಶ್ರೀ.ಎ.ಷಫಿ ಅಹಮದ್ ಮತ್ತು ಮುನಾವರ್ ಖಾನ್‌ರವರಿಂದ ಬಂದಿರುವ ವಿಷಯ. ವಾರ್ಡ್ ನಂ.26ರಲ್ಲಿ ಶ್ರೀ.ಎ.ಜಿ.ಬಷೀರ್ ಮತ್ತು. ಎ.ಜೆ.ಸಿರಾಜ್‌ರವರುಗಳ ಖಾತಾ ನಂಬರ್ ಡಿ7/2449/10832/856ಸಿ ಮತ್ತು ಡಿ7/2451/10834/858/ಬಿ–ಎ ರ ಬಾಬ್ತಯ ರಸ್ತೆಗಾಗು 10'*140'ಅಡಿ ಗಳನ್ನು ರಸ್ತೆಗಾಗಿ ಬಿಟ್ಟಿರುವುದರಿಂದ ಪರಿಹಾರ ಕೊಡಿಸಿಕೊಡಬೇಕೆಂದು ಕೋರಿರುವ ಬಗ್ಗೆ ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:7(5):–** ಸದರಿಯವರ ಮನವಿಯನ್ನು ಪರಿಶೀಲಿಸಲಾಗಿ ಸದರಿ ಸ್ವೊತ್ತಿಗೆ ಸಂಬಂಧಿಸಿದಂತೆ ಮೂಲ ದಾಖಲಾತಿಗಳನ್ನು ಪಡೆದು ನಿಯಮಾನುಸಾರ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.

**ವಿಷಯ:7(6):–** ಮಂಡ್ಯ ನಗರಸಭೆಗೆ ಸೇರಿದ ಗಾಂಧಿ ಪಾರ್ಕ್ ನಿರ್ವಹಣೆಯನ್ನು ದಿನಾಂಕ:19–8–2006ರ ನಿರ್ಣಯ ಸಂಖ್ಯೆ:10(3)ರಲ್ಲಿ ಒಂದು ವರ್ಷಕ್ಕೆ ಮಾತ್ರ ನೀಡುವುದೆಂದು ತೀರ್ಮಾನವಾಗಿರುವುದನ್ನು ಮುಂದಿನ (5) ಐದು ವರ್ಷಗಳವರೆಗೆ ಶ್ರೀ.ಎಸ್.ಬಿ.ಗ್ರಾಮೀಣಾಭಿವೃದ್ಧಿ ಸಂಸ್ಥೆ (ರಿ) ಒಬ್ಬರೇ ಮುಂದೆ ಬಂದಿರುವುದರಿಂದ ಸದರಿಯವರಿಗೆ ನೀಡುವ ಬಗ್ಗೆ.

**ತೀರ್ಮಾನ:7(6):–** ಒಪ್ಪಂದದ ಕರಾರು ಪತ್ರವನ್ನು ಕೊಟ್ಟ ದಿನಾಂಕದಿಂದ (5) ಐದು ವರ್ಷಗಳ ಅವಧಿವರೆಗೆ ನೀಡಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:7(7):–** ಮಾನ್ಯ ಸದಸ್ಯರಾದ ಶ್ರೀಮತಿ:ರತ್ನಮ್ಮರವರಿಂದ ಮನವಿ ವಿಚಾರ.
ವಾರ್ಡ್ ನಂಬರ್:7 ಕಲ್ಲಹಳ್ಳಿ ಎಂ.ಸಿ.ರಸ್ತೆಯ 1ನೇ ಕ್ರಾಸ್ ಶ್ರೀಮತಿ:ಮಹದೇವಮ್ಮರವರ ಮನೆ ಮುಂದೆ ಬಂದೀಗೌಡರ ಮನೆಯ ಪಕ್ಕದಲ್ಲಿ ಒಂದು ಸಂಖ್ಯೆ ಬೋರ್‌ವೆಲ್ ಕೊರಿಯಿಸಿ ಹ್ಯಾಂಡ್ ಪಂಪ್ ಅಳವಡಿಸಿಕೊಡಬೇಕೆಂದು ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:7(7):–** ಮಾನ್ಯ ಸದಸ್ಯರುಗಳಿಗೆ ನೀಡಿರುವ ನಗರಸಭಾ ಅನುದಾನದಲ್ಲಿ ಎರಡು (2)ಲಕ್ಷಗಳಲ್ಲಿ ರೂ.50,000/–ಗಳಿಗೆ ಬೋರ್‌ವೆಲ್ ಕೊರೆಯಿಸಿ ಹ್ಯಾಂಡ್‌ಪಂಪ್ ಹಾಕಿಸಿಕೊಳ್ಳಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:7(8):–** ವಾರ್ಡ್ ನಂ.10, ಸುಭಾಷ್‌ನಗರದಲ್ಲಿ ಬರುವ ರಸ್ತೆಯಾದ ಶ್ರೀ.ಎಸ್.ಎಲ್.ಪುಟ್ಟಮಾದಯ್ಯ, ಲಾಯರ್ ರವರ ಮನೆ ಮುಂದೆ ಮತ್ತು 8ನೇ ಕ್ರಾಸ್‌ನಲ್ಲಿ ಬರುವ ರಸ್ತೆ ಮತ್ತು ಚರಂಡಿ ಕಾಮಗಾರಿ ಅಂದಾಜು ಮೊತ್ತ ರೂ.5 ಲಕ್ಷಗಳಿಗೆ ಕಾಮಗಾರಿ ಕೈಗೊಳ್ಳುವ ವಿಚಾರ. ಮತ್ತು ಸುಭಾಷ್‌ನಗರ ಕ್ರಿಶ್ಚಿಯನ್ ಕಾಲೋನಿಗಳಲ್ಲಿ ಡಾಂಬರೀಕರಣ ಕಾಮಗಾರಿ ಮಾಡಿಸುವ ಬಗ್ಗೆ ಅಂದಾಜು ವೆಚ್ಚ ರೂ.3.00ಲಕ್ಷಗಳಿಗೆ ಮಾಡಿಸುವಂತೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:7(8):–** ಕಾಮಗಾರಿಗಳನ್ನು ನಿರ್ವಹಿಸಲು ಮಂಜೂರ್ಮಾಡಲಾಯಿತು.

**ವಿಷಯ:7(9):–** ಸಾಮಾನ್ಯ ಸಭೆ ದಿನಾಂಕ:28–11–2006ರ ವಿಷಯ 3 ರಲ್ಲಿ 12ನೇ ಹಣಕಾಸು ಯೋಜನೆ ಯಡಿ ಬಿಡುಗಡೆಯಾಗಿರುವ ಅನುದಾನ ಹಾಗೂ ನಗರಸಭಾ ನಿಧಿಯಿಂದ ವಾರ್ಡ್‌ವಾರು 4ಲಕ್ಷಗಳ ಕಾಮಗಾರಿಗಳನ್ನು ಕೈಗೊಳ್ಳಲು ತೀರ್ಮಾನಿಸಿರುವುದು ಸರಿಯಷ್ಟೆ. ಕ್ರಮವಾಗಿ 12ನೇ ಹಣಕಾಸು ಹಣಕಾಸು ಯೋಜನೆಯಡಿಯಲ್ಲಿ ವಾರ್ಡ್‌ವಾರು ರೂ.2 ಲಕ್ಷಗಳ ಕಾಮಗಾರಿ ಕೈಗೊಳ್ಳುವಂತೆಯು ನಗರಸಭಾ ನಿಧಿಯಿಂದ ವಾರ್ಡ್‌ವಾರು 2 ಲಕ್ಷ ರೂ.ಗಳಲ್ಲಿ ಕಾಮಗಾರಿ ನಿರ್ವಹಿಸುವಂತೆ ತೀರ್ಮಾನಿಸಲಾಗಿತ್ತು.

ಈ ಕೆಳಕಂಡ ವಾರ್ಡ್‌ಗಳಲ್ಲಿ ನಗರಸಭಾ ನಿಧಿಯಿಂದ ಕೈಗೊಳ್ಳುವ ಕಾಮಗಾರಿಗಳ ಬದಲು 250ವ್ಯಾಟ್ಸ್ ಮೆಟಲ್ ಹಲಾಯ್ಡ್ ಬೀದಿ ದೀಪಗಳನ್ನು ಅಳವಡಿಸುವಮತೆ ಹಾಗೂ ಮಂಡ್ಯ ಕ್ಷೇತ್ರದ ಶಾಸಕರು ಅರ್ಕೇಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆಗೂ ಸಹ ಮೆಟಲ್ ಹಲಾಯ್ಡ್ ಬೀದಿ ದೀಪಗಳನ್ನು ಖರೀದಿಸಿ ಅಳವಡಿಸುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.
3,4,6,10,16,17,20,22,29,30,31 ವಾರ್ಡ್‌ಗಳಿಗೆ.

**ತೀರ್ಮಾನ:7(9):–** ಕಾಮಗಾರಿಗಳನ್ನು ಬದಲಾಯಿಸಿ ಮಾನ್ಯ ಸದಸ್ಯರುಗಳು ಹಾಗೂ ಮಂಡ್ಯ ಕ್ಷೇತ್ರದ ಶಾಸಕರ ಮನವಿಯಂತೆ 250 ವ್ಯಾಟ್ಸ್ ಮೆಟಲ್ ಹಲಾಯ್ಡ್ ಬೀದಿ ದೀಪಗಳನ್ನು ಖರೀದಿಸಿ ಅಳವಡಿಸುವು ದೆಂದು ತೀರ್ಮಾನಿಸಲಾಯಿತು.

**ವಿಷಯ:7(10):–** ಮಂಡ್ಯ ನಗರಸಭೆಯಲ್ಲಿ ಎಫ್.ಬಿ.ಎ.ಎಸ್. ಪದ್ಧತಿ ಅನುಷ್ಠಾನದ ಬಗ್ಗೆ ಕೊಟೇಷನ್‌ನ್ನು ದಿನಾಂಕ :1–12–2006ರಂದು ಕರೆಯಲಾಗಿದ್ದು ಬಂದಿರುವ ಕೊಟೇಷನನ್ನು ಅಂಗೀಕರಿಸುವ ವಿಚಾರ.

**ತೀರ್ಮಾನ:7(10):–** ವಿಷಯವನ್ನು ಚರ್ಚಿಸಲಾಯಿತು. ಕಡಿಮೆ ದರದ ಕೊಟೇಷನನ್ನು ಒಪ್ಪಿ ಮಂಜೂರ್ಮಾಡಲಾಯಿತು.

**ಸಹಿ:**
**(ಸಿ.ವಿಜಯಲಕ್ಷ್ಮಿ)**
**ಅಧ್ಯಕ್ಷರು,**
**ನಗರಸಭೆ, ಮಂಡ್ಯ.**

**"ನಕಲು"**
**ಸಹಿ:**
**ಪೌರಾಯುಕ್ತರು,**
**ನಗರಸಭೆ, ಮಂಡ್ಯ.**